**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ, ಇವರು ನಿಯಮ 72ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ:** ಸಾರಿಗೆ ಇಲಾಖೆಯಲ್ಲಿ ಅತಿಹೆಚ್ಚು ಮೌಲ್ಯದ ಅಂದರೆ ಐಯರ್-ಎಂಡ್ ವಾಹನ (ಐಷಾರಾಮಿ) ನೊಂದಾವಣೆ ಮಾಡಿ, ರೂ.100.00 ಕೋಟಿಗೂ ಮೀರಿ ಅಕ್ರಮವಾಗಿ ಸಂಗ್ರಹಿಸಿ ಸರ್ಕಾರದ ಖಜಾನೆಗೆ ಜಮಾ ಮಾಡದೇ ಹಣ ದುರುಪಯೋಗ ಮಾಡಿಕೊಂಡಿರುವುದು ಇಲಾಖೆಯು ಲೆಕ್ಕಪತ್ರಗಳ ಆಡಿಟ್ ಮಾಡಿದ ಸಂದರ್ಭದಲ್ಲಿ ಹೊರಬಂದಿದೆ. ಈ ಬಗ್ಗೆ ಸದನದಲ್ಲಿ ಹಿಂದಿನ ಸಾರಿಗೆ ಸಚಿವರು ಉತ್ತರ ನೀಡುವ ಸಮಯದಲ್ಲಿ ಇಂತಹ ಪ್ರಕರಣಗಳು ಇಲಾಖೆಯಲ್ಲಿ ಸಂಭವಿಸಿರುವುದು ನಿಜವೆಂದು ಒಪ್ಪಿಕೊಂಡು, ಈ ಬಗ್ಗೆ ಸಿಐಡಿ ಮುಖೇನ ತನಿಖೆ ನಡೆಸುವುದಾಗಿ ಸದನದಲ್ಲಿ ಆಶ್ವಾಸನೆ ನೀಡಿರುತ್ತಾರೆ. ಆದರೆ ಸರ್ಕಾರ ಈ ಬಗ್ಗೆ ಇದುವರೆವಿಗೂ ಯಾವುದೇ ಕ್ರಮವನ್ನು ವಹಿಸಿರುವುದಿಲ್ಲ. ಆದುದರಿಂದ ಇಂತಹ ಮಹತ್ವದ ವಿಷಯದ ಬಗ್ಗೆ ಸದನದಲ್ಲಿ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

*****

**ಉತ್ತರ:-**

ಸಾರಿಗೆ ಇಲಾಖೆಯ ಬೆಂಗಳೂರು (ಕೇಂದ್ರ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ದಿನಾಂಕ:01.04.2015 ರಿಂದ 30.11.2021 ರವರೆಗೆ ನೋಂದಣಿಯಾಗಿರುವ High-end Cars [Value exceeding Rs.20 Lakhs] (Light Motor Vehicles Non-Transport) ವಾಹನಗಳ ಜೀವಿತಾವಧಿ ತೆರಿಗೆಯನ್ನು ಪಾವತಿಸಿಕೊಳ್ಳದೇ ಇರುವ ಬಗ್ಗೆ ಪ್ರಾಥಮಿಕ ವರದಿಯನ್ನು ಪಡೆದು, ಆ ವರದಿಯ ಆಧಾರದ ಮೇಲೆ ವಿಚಾರಣೆಯನ್ನು ನಡೆಸಲು ಕರ್ನಾಟಕ ಲೋಕಾಯುಕ್ತರವರಿಗೆ ಅಥವಾ ಅಪರಾಧ ತನಿಖಾ ದಳ (ಸಿ.ಐ.ಡಿ)ಕ್ಕೆ ವಹಿಸಬಹುದೆಂಬ ಅಭಿಪ್ರಾಯದೊಂದಿಗೆ ದಿನಾಂಕ:03.03.2022 ಮತ್ತು 06.07.2022ರಂದು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಪ್ರಸ್ತಾವನೆಯನ್ನು ಪರಿಶೀಲಿಸಿ, ಬೆಂಗಳೂರು ನಗರ ವಿಭಾಗದ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ತೆರಿಗೆ ಪಾವತಿಯಲ್ಲಿ ಆಗಿರುವ ವ್ಯತ್ಯಾಸಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ನೀಡಲು ಪ್ರಕರಣವನ್ನು Comptroller and Auditor General (CAG) ಅವರಿಗೆ ವಹಿಸಿ, ಅವರ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರಿಗೆ ನಿರ್ದೇಶಿಸಲಾಗಿತ್ತು. ಅದರಂತೆ ಬೆಂಗಳೂರು ನಗರ ವಿಭಾಗದ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕೂಲಂಕಷವಾಗಿ ಪರಿಶೀಲಿಸಿ ಆಡಿಟ್ ವರದಿಯನ್ನು ನೀಡುವಂತೆ ಮಹಾಲೇಖಪಾಲರನ್ನು ಕೋರಲಾಗಿತ್ತು.

ಮಹಾಲೇಖಪಾಲರು 2015-16ನೇ ಸಾಲಿನಿಂದ 2021-22ನೇ ಸಾಲಿನವರೆಗಿನ ಬೆಂಗಳೂರು (ಕೇಂದ್ರ), ಎಲೆಕ್ಟ್ರಾನಿಕ್‌ಸಿಟಿ ಮತ್ತು ಬೆಂಗಳೂರು (ಪೂರ್ವ) ಪ್ರಾದೇಶಿಕ ಸಾರಿಗೆ ಕಛೇರಿಗಳ ಕರಡು ಆಡಿಟ್ ವರದಿಯನ್ನು ನೀಡಿ, ವರದಿಯಲ್ಲಿನ ವಾಸ್ತವ ಅಂಶಗಳು ಹಾಗೂ ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡಿ ಷರಾಗಳನ್ನು ನಮೂದಿಸಿ ಮೂರು ವಾರಗಳಲ್ಲಿ ಮಹಾಲೇಖಪಾಲರ ಕಛೇರಿಗೆ ನೀಡಲು ತಿಳಿಸಿದ್ದರು.

ಮಹಾಲೇಖಪಾಲರಿಗೆ ಕರಡು ಆಡಿಟ್ ವರದಿಯ ಮೇಲೆ ಷರಾಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದ್ದು, ಅಂತಿಮ ಆಡಿಟ್ ವರದಿ ಬಂದ ನಂತರ ಸದರಿ ವರದಿಯನ್ವಾದರಿಸಿ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಸಂಖ್ಯೆ: ಟಿಡಿ 55 ಟಿಡಿಕ್ಯೂ 2023